# ಒಡಪಿನ ಒಯ್ಯಾರ

ಸಮುದರ ದಂಡಿಗಿ
ಸರಸೋತಿ ಗಿಡ ಹುಟ್ಟಿ
ಸಾಲ ಮುತ್ತೈದೇರು
ಹೆಸರ ಕೇಳಲಿ ಬಂದು
ನನ್ನ ರಾಯರ ಹೆಸರ
ನಾ ಏನ ಹೇಳಲಿ
ಕಣ್ಣಾಗ ಹಾರ, ಕನಡ್ಯಾಗ ಹಾರ
ಹುಬ್ಬಿನ್ಯಾಗ ಹಾರ
ಹುಬ್ಬಳ್ಯಾಗ ಹಾರ

ಹೊನ್ನ ಕಿರಣಗಿ ಊರಾಗ ಬನ್ನಿಯ ಮುಡಿತಾರ

ಇದು ಗಂಡನ ಹೆಸರು ಹೇಳುವ ಒಡಪು ಎಂದು ಕರೆಯುವುದಿದೆ. ಉತ್ತರ ಕರ್ನಾಟಕದ ಸೀಮೆಯಲ್ಲಿ ಹೆಂಡತಿಯೊಬ್ಬಳು ಗಂಡನ ಹೆಸರನ್ನು ಖುಲ್ಲಂಖುಲ್ಲಾ ಹೇಳಬಾರದು. ಹಾಗೇ ಕರೆದರೆ ಅದು ಅತ್ಯಂತ ಕೆಟ್ಟ ಲಕ್ಷಣ; ಅಷ್ಟೇ ಅಲ್ಲ; ಹೆಂಡತಿ ಗಂಡನನ್ನು ಏನ್ರೀ, ಬರ್ರೀ ಅಂತ ಬಹುವಚನದಲ್ಲಿ ಕರೆಯಬೇಕಲ್ಲದೆ ಹೆಸರಿನಿಂದ ಕರೆದರೆ ಗಂಡನ ಆಯಸ್ಸು ಕಡಿಮೆ ಆಗುತ್ತದೆ. ಗಂಡ ಸತ್ತರೆ ವಿಧವೆ ಪಟ್ಟ ಕಾಯಂ. ಆದ್ದರಿಂದ ಗಂಡ ಎಷ್ಟೇ ತನ್ನಕ್ಕಿಂತಲೂ ದೊಡ್ಡವನಿರಲಿ, ರೋಗಿಷ್ಟ, ಕುಡುಕ, ದುಷ್ಟ, ನೀಚ ಏನೇ ಇರಲಿ. ಅಂವಾ ಇರಬೇಕು. ಬದುಕಿದ್ದು ಅಂವಾ ಎಷ್ಟೇ ಕಷ್ಟ ನೀಡಿದರೂ ಪರವಾ ಇಲ್ಲ. ಆದರೆ ಅಂವಾ ಸತ್ತು ತಾ ವಿಧವೆ ಪಟ್ಟಾ ಹೊತ್ತು ಸಮಾಜದಿಂದ ತಿರಸ್ಕಾರ, ನಿಂದೆ, ಅಪಮಾನ ಸಹಿಸುವುದು ಬ್ಯಾಡ ಅಂತ ಪ್ರತಿಯೊಬ್ಬ ಮಹಿಳೆ ಮುತ್ತೈದೆತನ ಕೊಡು ದೇವರೆ ಅಂತ ಹರಕಿ ಕಟ್ಟತಾಳ.

ಹೀಂಗ್ ಇರೂದ್ರಿಂದ ಗಂಡನ ಹೆಸರ ಕರಿಬಾರದು. ಆದ್ರೂ ಮಂಗಳ ಕಾರ್ಯ, ಸಭೆ, ಸಮಾರಂಭದಾಗ ಗಂಡನ ಹೆಸರ ಹೇಳಬೇಕಲ್ಲ. ಪತಿದೇವರಂದ್ರ ಮ್ಯಾಲಿನ ದೇವರಕ್ಕಿಂತ ದೊಡ್ಡವ್ರು. ಅವರನ್ನ ಹಂಗ್ ಕರೆಯವುದ್ಯಾಂಗ್? ಅಷ್ಟಕ್ಕೂ ಗಂಡನ ಹೆಸರು ಹೇಳೂದು ಅಂದ್ರ ಅದೇನ್ ಹಗುರಾ! ನಾಚಿಕಿ, ಅಂಜಿಕಿ, ಘರಮಾಣುಕಿ, ಎಲ್ಲಾ ಗವ್ವ್ ಅಂತ ಸುತ್ತಿ ಬರತಾವು. ಹೀಂಗಾಗಿ ಗಂಡನ ಹೆಸರು ಹೇಳು ಮುಂದ್ ಸೆರಗ ಹೊಚಗೊಂಡು, ಕುಂಕುಮ ಹಚಗೊಂಡು ಅಗ್ದೀ ಮರ್ಯಾದಿಯಿಂದ ಈ ಮ್ಯಾಲಿನಂಥ ಒಗಟಾ ಹಾಕಿ ಹೇಳಬೇಕು. ಹಂಗರೇ ಗಂಡನ ಹೆಸರ ಹೇಳು ಅಂದ್ರ ನಮ್ಮವರು ಥಟ್ ಅಂತ ಹೇಳೂದಿಲ್ಲ. ಹೇಳಬಾರದು. ಒನಪು ಒಯ್ಯಾರ ಜೋರಿ ಜಬರಿ ಮಾಡಿದ ನಂತರವೇ ರಾಯನ ವರ್ಣನ ಮಾಡಿ ಹೇಳಬೇಕು. ಸಮುದ್ರ ದಂಡಿಗಿ ಸರಸೋತಿ ಗಿಡ (ವರ್ಣಮಯ ಆಲಂಕಾರಿಕ ಸಸಿ) ಹುಟ್ಟಬೇಕು. ಅಂಥಲ್ಲಿ ಮುತ್ತೈದೇರು ಸಾಲು ಹತ್ತಿ ಬಂದು ಕೇಳಿದರೆ, ಆಗ ಅವಳು ಹೇಳುತ್ತಾಳೆ. ಗಂಡನ ಹೆಸರೇನ ಕೇಳತೀರಿ. ಆತ ಆಕೀನ ಹುಬ್ಬಿನ್ಯಾಗ ಮತ್ ಹುಬ್ಬಳಿ ಊರಾಗ ಇರತಾರಂತೆ. ಇಷ್ಟು ಹೇಳಿ ಅಸಲಿಗಿ ತನ್ನ ಗಂಡ ಇರುವ ಹೊನ್ನ ಕಿರಣಗಿ (ಕಲಬುರಗಿ ಸಮೀಪದ ಹಳ್ಳಿಯೊಂದರ ಹೆಸರು) ಊರಿನ ಹೆಸರು ಹೇಳಿ ಕೊನೆಗೆ ಆತನ ಹೆಸರು ಹೇಳಿ ಖೊಖ್ಖ್ ಖೊಖ್ಖ್ ನಗಬೇಕು. ನಂತರ ಮುಂದಿನಕಿ ಸರದಿ. ಅವಳೇನ್ ಕಮ್ಮಿ ಅವಳು ಅಷ್ಟೇ ಠಬರ್ನಿಂದ

'ಎಳ್ಳಹೂವಿನ ಸೀರಿ/ ಬೆಳ್ಳಿ ಕಾಲುಂಗರ/ ಒಳ್ಳೆಯವರ ಮಗಳಂತ/ ಹೊಳ್ಳಿ ಹೊಳ್ಳಿ ನೋಡತಾರ' ನಂತರ ಗಂಡನ ಹೆಸರ ಹೇಳಿ ಮುಂದಿನಕಿಗಿ ಹೂಂ ನೀ ಹೇಳು ಅಂತಾಳ. ಆಕೀನೂ ಕಮ್ಮಿಲ್ಲ. ಮಹಾರಾಷ್ಟ್ರ ಗಡಿ ಭಾಗದವಳು ಏನಂತಾಳ 'ಶೋಲೆ ಮದಿ ಗಬ್ಬರಸಿಂಗ್ ಸಾಂಗತಾ ಅರೇ ಓ ಸಾಂಬಾ. ಮೀ ಅಮಚಿ ನವರಾಂಚಿ ನಾವ್ ಸಾಂಗತೋ ಥೋಡಾ ಥಾಂಬಾ' ಮರಾಠಿ ಭಾಷೆಯ ಒಡಪದು. ಶೋಲೆ ಸಿನಿಮಾ ನೋಡಿದವ್ರಿಗಿ ಇದು ಪಸಂದ ತಿಳಿತಾದ. ಸಿನಿಮಾದಲ್ಲಿ ವಿಲನ್ ಆಗಿದ್ದ ಗಬ್ಬರ್‌ಸಿಂಗ್‌ನ ಡೈಲಾಗ 'ಅರೇ ಓ ಸಾಂಬಾ' ಇದು 1980ರ ಸುಮಾರಿಗೆ ಭಾರಿ ಸದ್ದು ಮಾಡಿದ ಜಿ.ಪಿ. ಸಿಪ್ಪಿ ನಿರ್ದೇಶನದ ಹಿಂದಿ ಸಿನಿಮಾ. ಅದನ್ನು ಬಳಸಿ ಪ್ರಾಸ ಜೋಡಿಸುತ್ತ ನಾನು ನನ್ನ ಗಂಡನ ಹೆಸರು ಹೇಳುತ್ತೇನೆ ಸ್ವಲ್ಪ ನಿಲ್ಲಿರಿ ಅನ್ನುತ್ತಾಳೆ.

ಇಂಥ ಒಡಪುಗಳ ದೊಡ್ಡ ಉಗ್ರಾಣವೆ ಇಲ್ಲಿದೆ. ಅವುಗಳನ್ನು ಕಟ್ಟಿದ ಜನಪದರ ಪ್ರತಿಭೆ ಸಾಮಾನ್ಯವೇನಲ್ಲ. ಅಲ್ಲಿ ಮೋಜು, ಮಸ್ತಿ, ವ್ಯಂಗ್ಯ, ಒಲುಮೆ, ವಾದ, ಸಂವಾದ ಇರುತ್ತವೆ. ಮೂರರಿಂದ ಹತ್ತು ಹದಿನೈದು ಸಾಲುಗಳವರೆಗೆ ವಿಸ್ತರಿಸಿಕೊಂಡಿರುವ ಈ ಒಗಟುಗಳು ಆಯಾ ಪ್ರದೇಶದ ಸಂಸ್ಕೃತಿ, ಅವರ ಬದುಕು, ಬವಣೆ, ದೊಡ್ಡಸ್ತನ, ಕೀಳರಿಮೆ ಮುಖ್ಯವಾಗಿ ಫ್ಯೂಡಲ್ ವ್ಯವಸ್ಥೆಯ ದರ್ಪ, ದೀಮಾಕುಗಳನ್ನು ವ್ಯಕ್ತಪಡಿಸುತ್ತವೆ. ಗಂಡನ ಹೆಸರು ಹೇಳಲು ಸಾವಿರಾರು ಒಗಟುಗಳು ಸೃಷ್ಟಿಯಾಗಿದ್ದರೆ ಹೆಂಡತಿ ಹೆಸರು ಹೇಳುವ ಒಗಟುಗಳ ಸಂಖ್ಯೆ ಕಮ್ಮೀನೆ. ಏಕೆಂದರೆ ಹೆಂಡತಿಯನ್ನು ಹೆಸರಗೊಂಡು ಕರಿಬಹುದು. ಅದೂ ಅಪಭ್ರಂಸಗೊಳಿಸಿ ಕರಿಬೇಕು. ಇದಕ್ಕೆ ನಮ್ಮ ಕನ್ನಡದ ಕವಿ ರನ್ನನೇ ಅಗ್ರಪಂಕ್ತಿ ಹಾಕಿದ್ದಾನೆ. ಆತ ತನ್ನ ಇಬ್ಬರು ಹೆಂಡಿರ ಹೆಸರು ಜಕ್ಕಿವಕ್ಕಿ ಮತ್ತು ಶಾಂತಮ್ಮರನ್ನು ಜಕ್ಕಿ, ಶಾಂತಿ ಎಂದೇ ಅಂಕಿತಗೊಳಿಸಿದ್ದಾನೆ. ರನ್ನನೂ ನಮ್ಮದೆ ಬಾಗಲಕೋಟೆ ಜಿಲ್ಲೆಯ ಮುಧೋಳದವನಲ್ಲವೆ?

ಗಂಡಸರು ಹೇಳುವ ಒಗಟೊಂದು ಹೀಗಿದೆ. 'ಹಗ್ಗದ್ಲೇ ಹೊಡದ್ರ ಮಗ್ಗಲ್ ಬಂದು ಬೀಳತಾಳ' ಪುರುಷ ಪ್ರಧಾನ ಮನೋಭಾವನೆ ಅದೆಷ್ಟು ಮಡುಗಟ್ಟಿದೆಯಲ್ಲವೆ? ಹೆಣ್ಮಕ್ಕಳು ಮಾತ್ರ ನನ್ನ ರಾಯ, ಯಜಮಾನ, ದೊರೆ, ದೇವರು ಅಂತೆಲ್ಲ ಬಣ್ಣಿಸಿ ಹೇಳಿದರೆ ಗಂಡಸರು ಮಾತ್ರ ಇದ್ದ ಹೆಸರು ಅಪಭ್ರಂಶಗೊಳಿಸಿ ಮಾತಿನಲ್ಲಿಯೂ ಹಗ್ಗದಿಂದ ಹೊಡದೇ ಸಂಬೋಧಿಸುತ್ತಾರೆ. ಹೆಣ್ಣನ್ನು ಕೀಳಿಕರಿಸಿದವರಿಗೆ ಇದು ತಪ್ಪು ಅನಿಸಿದ್ದೆ ಇಲ್ಲ. ಅವಿವಾಹಿತ ಮಹಿಳೆಯರಿಗೆ ಗಂಡನ ಹೆಸರು ಕೇಳಿದರೆ ಅವರು ಸೆಟೆದು 'ಅಮವಾಸಿ ಕತ್ಲೀ ಗೋಧಿ ಬಿತ್ತಿ, ಲಗ್ನ ಆಗಲ್ದೇ ಹೆಸರು ಕೇಳವರ್ ಹೆಣಾ ಎತ್ತಿ' ಅಂತ ಬಯ್ದರೆ ಯಾರೇನೂ ಅನುವಂತಿಲ್ಲ.

ನಮ್ಮ ಜನಪದ ವಿದ್ವಾಂಸರು ಅಳಿದುಳಿದ ಕೆಲವು ಒಗಟುಗಳನ್ನು ಅಲ್ಲಲ್ಲಿ ಸಂಗ್ರಹಿಸಿ ಕೊಟ್ಟಿದ್ದುಂಟು. ಅವುಗಳಿಗೆ ಪ್ರಸ್ತಾವನೆ ಬರೆದು ಅಲ್ಲಿನ ರಸವತಿಕೆ, ಮಡಿವಂತ ಮೌಲ್ಯಗಳನ್ನು ಎತ್ತಿ ಹಿಡಿದಿದ್ದು ಬಿಟ್ಟರೆ ಸ್ತ್ರೀವಾದಿ ದೃಷ್ಟಿಕೋನದಿಂದ ವಿವೇಚಿಸಿದ್ದು ಇಲ್ಲ. ಸ್ತ್ರೀಯರು ಹೇಳುವ ಒಗಟುಗಳಲ್ಲಿ ಪುರುಷ ಪಾರಮ್ಯದ ಧೀಮಾಕು, ಅಬ್ಬರಗಳಿದ್ದರೆ ಪುರುಷರು ಹೇಳುವ ಒಗಟುಗಳಲ್ಲಿ ಸ್ತ್ರೀ ತುಚ್ಛೀಕರಣ, ಲಿಂಗ ಅಸಮಾನತೆಯ ಅನಿಷ್ಟಗಳು ವಿಜೃಂಭಿಸಿವೆ. ಹೆಣ್ಣನ್ನು ಭೋಗದ ವಸ್ತು, ತೊತ್ತು ಎಂದು ಪರಿಭಾವಿಸಿದ ಸಮಾಜ ವ್ಯವಸ್ಥೆಯೇ ಇವುಗಳಲ್ಲಿ ಪ್ರತಿನಿಧಿಕರಣಗೊಂಡಿದೆ. ಮಜಾ ಏನು ಅಂದರೆ ಮಹಿಳಾ ವಿರೋಧಿ ಮೌಲ್ಯಗಳನ್ನೆ ಮಹಿಳೆಯರು ಸುಖಿಸುವಂತೆ ಮಾಡಲಾಗಿದೆ. ಆದ್ದರಿಂದ ನಮ್ಮ ಪರಂಪರೆಯಲ್ಲಿ ಬಂದದ್ದೆಲ್ಲವೂ ಶ್ರೇಷ್ಠವೂ ಅಲ್ಲ. ಕನಿಷ್ಠವೂ ಅಲ್ಲ ಎಂಬ ಎಚ್ಚರ ಇರಬೇಕು.

■ ಮೀನಾಕ್ಷಿ ಬಾಳಿ

## ಮಾತೇ ಮುತ್ತು

- ಕಲಿತವನು ಬಲ್ಲವನು, ಬಲ್ಲವನು ಬಾಳುವನು.
  —ಗಾದೆ
- ಸಾಯುವುದು ಸುಲಭ, ಬಾಳುವುದು ದೊಡ್ಡ ಹೊಣೆಗಾರಿಕೆ.
  —ಎಸ್.ವಿ. ರಂಗಣ್ಣ
- ಮಾನವ ಕೆಟ್ಟ ಕೆಲಸಗಳನ್ನು ಮಾಡಲು ಯೋಚಿಸುವುದಿಲ್ಲ. ಆದರೆ ಒಳ್ಳೆಯ ಕೆಲಸ ಮಾಡಲು ಬಹಳ ಯೋಚಿಸುತ್ತಾನೆ.
  —ಶೇಷಗಿರಿರಾವ್
- ದೇವರು ಯಾರನ್ನು ಹರಸಬೇಕೆಂದು ತೀರ್ಮಾನಿಸುತ್ತಾನೋ ಅವರನ್ನೇ ಅತ್ಯಂತ ಕಠಿಣ ಪರೀಕ್ಷೆಗೆ ಗುರಿಪಡಿಸುತ್ತಾನೆ.
  —ಮಹಾತ್ಮ ಗಾಂಧಿ
- ಸುಳಿದಾಡುವ ಜೀವದ ಗುಣವರಿತರೆ ನಿಜ ಬ್ಯಾರೆಲೊ ಮನಸೇ.
  —ಶಿಶುನಾಳ ಶರೀಫ
- ಮೌನ ಮೊಗ್ಗೆಯನೊಡಿದು ಮಾತರಳಿ ಬರಲಿ, ಮೂರು ಘಳಿಗೆ ಬಾಳು ಮಗಮಗಿಸುತಿರಲಿ.
  —ಚನ್ನವೀರ ಕಣವಿ
- ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿಯಾಗಿ ಇರುವುದರ ರಹಸ್ಯ.
  —ದ.ರಾ. ಬೇಂದ್ರೆ
- ಮಂದಿರದಲ್ಲಿನ ದೇವರು ತನ್ನ ದೀಪವನ್ನು ತಾನೆ ಹಚ್ಚಿಕೊಳ್ಳಲಿಲ್ಲ ಎಂದ ಮೇಲೆ ನಿಮ್ಮ ಬಾಳಲ್ಲಿ ಹೇಗೆ ಬೆಳಕು ಬೀರಬಲ್ಲ.
  —ಬಿ.ಆರ್. ಅಂಬೇಡ್ಕರ್